# ಕೃಷಿ ಅಭಿಯಾನ – 2022-23

## 'ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ'

## ಪೀಠಿಕೆ:

ಕೃಷಿಯನ್ನು ಹೆಚ್ಚು ಲಾಭದಾಯಕವಾಗಿ ಮಾಡಲು ಮತ್ತು ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಭದ್ರತೆ ಒದಗಿಸಲು, ಲಭ್ಯವಿರುವ ಸಾಗುವಳಿ ಜಮೀನಿನಲ್ಲಿ ಗರಿಷ್ಠ ಕೃಷಿ ಉತ್ಪಾದನೆಯನ್ನು ಪಡೆಯುವುದು ಅತ್ಯಾವಶ್ಯಕವಾಗಿದೆ. ಇದಕ್ಕಾಗಿ, ಕೃಷಿ ಮತ್ತು ತೋಟಗಾರಿಕೆಯೊಂದಿಗೆ ಪೂರಕ ಉಪ ಕಸುಬುಗಳಾದ ಪಶುಸಂಗೋಪನೆ. ರೇಷ್ಮೆ ಕೃಷಿ, ಮೀನುಗಾರಿಕೆ ಮುಂತಾದ ಚಟುವಟಿಕೆಗಳನ್ನು ರೈತರು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಕೃಷಿ ವಲಯದ ಪ್ರಸ್ತುತ ಪರಿಸ್ಥಿತಿಯನ್ನು ಮನಗಂಡು, ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವಶ್ಯವಿರುವ ತಂತ್ರಜ್ಞಾನವನ್ನು ತಲುಪಿಸಲು, ಏಕಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸಲು, ವಿವಿಧ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಸಮೂಹ ಜಾಗೃತಿ ಕಾರ್ಯಕ್ರಮವಾದ '**ಕೃಷಿ ಅಭಿಯಾನ**' ವನ್ನು ರೂಪಿಸಲಾಗಿದೆ.

## ಉದ್ದೇಶ:

- ಕೃಷಿ ಹಾಗೂ ಬೇಸಾಯ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವುದು.
- ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ.
- ವಿಜ್ಞಾನಿಗಳೊಂದಿಗೆ ರೈತರ ಸಂವಾದ.

## ಕಾರ್ಯಕ್ರಮದ ಸ್ವರೂಪ:

ಕೃಷಿ ಅಭಿಯಾನ ಈ ಪ್ರಮುಖ ಘಟಕಗಳನ್ನೊಳಗೊಂಡಿರುತ್ತದೆ.

- ಸಮಗ್ರ ಕೃಷಿ ಮಾಹಿತಿ ಘಟಕ
- ರೈತ ಸಂವಾದ

ಕಾರ್ಯಕ್ರಮದ ಅನುಷ್ಠಾನ: ಕೃಷಿ ಅಭಿಯಾನವನ್ನು ಏಪ್ರಿಲ್ ನಿಂದ ಜೂನ್ ಮಾಹೆಯಲ್ಲಿ ಅನುಷ್ಠಾನಗೊಳಿಸುವುದು.

## ಭಾಗವಹಿಸುವಿಕೆ:

- ಕೃಷಿ ಮತ್ತು ಇತರೆ ಇಲಾಖಾ ಅಧಿಕಾರಿಗಳು-ತೋಟಗಾರಿಕೆ/ ರೇಷ್ಮೆ/ಮೀನುಗಾರಿಕೆ/ ಪಶುಪಾಲನೆ/ ಸಹಕಾರ/ ಕಂದಾಯ ಇಲಾಖೆಗಳು ಕಡ್ಡಾಯವಾಗಿ ಭಾಗವಹಿಸಬೇಕು.
- ಕೃಷಿ ವಿಶ್ವ ವಿದ್ಯಾಲಯಗಳ ವಿಜ್ಞಾನಿಗಳು, ಪಶುವೈದ್ಯಕೀಯ ವಿಶ್ವವಿದ್ಯಾಲಯದ ವಿಜ್ಞಾನಿಗಳು, ರೈತರು, ಆತ್ಮ ಗುಂಪುಗಳು, ಸಾವಯವ ಕೃಷಿ ಸಂಘಗಳು, ಸ್ವಸಹಾಯ ಗುಂಪುಗಳು, ಸರ್ಕಾರೇತರ ಸಂಸ್ಥೆಗಳು ಭಾಗವಹಿಸಬೇಕು.
- ಆಯಾ ಕ್ಷೇತ್ರದ ಜನ ಪ್ರತಿನಿಧಿಗಳು.
- ಕಂದಾಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳು/ ವಿಷಯಗಳು ಹೆಚ್ಚಾಗಿ ರೈತರು ಎದುರಿಸುತ್ತಿರುವುದರಿಂದ, ಗ್ರಾಮ ಲೆಕ್ಕಿಗರು, ಕಂದಾಯ ಇಲಾಖಾ ಸಿಬ್ಬಂದಿಯವರು ಕಡ್ಡಾಯವಾಗಿ ಭಾಗವಹಿಸಬೇಕು.
- ಸಾಲ ಸೌಲಭ್ಯ ನೀಡುವ ಸಂಸ್ಥೆಗಳು/ಬ್ಯಾಂಕ್ ಸಿಬ್ಬಂದಿ, ಸಂಸ್ಥೆಯ ಪ್ರತಿನಿಧಿಗಳು ಹಾಗೂ ವಿಮೆ ಸಂಸ್ಥೆಯ ಪ್ರತಿನಿಧಿಗಳು ಕಡ್ಡಾಯವಾಗಿ ಭಾಗವಹಿಸಬೇಕು.

**ಪ್ರಚಾರ ಕಾರ್ಯಕ್ರಮ:** ಪ್ರತಿ ಹೋಬಳಿಯಲ್ಲಿ, ಗ್ರಾಮ ಪಂಚಾಯತಿವಾರು ಕಾರ್ಯತಂಡವನ್ನು ರಚಿಸಿಕೊಂಡು, ಆಯಾ ಪಂಚಾಯಿತಿಗೆ ಸಿದ್ಧಪಡಿಸಿದ ವೇಳಾಪಟ್ಟಿಯಂತೆ ಎಲ್ಲಾ ಗ್ರಾಮ ಪಂಚಾಯತಿಗಳು ಒಳಗೊಂಡಂತೆ ಮೂರು ದಿನಗಳ ಕಾಲ ತೀವ್ರ ಪ್ರಚಾರ ಕಾರ್ಯದ ಜೊತೆಗೆ ವಿಜ್ಞಾನಿಗಳು ಹಾಗೂ ಅಧಿಕಾರಿಗಳನ್ನೊಳಗೊಂಡ ತಂಡಗಳು ಸ್ಥಳೀಯವಾಗಿ ರೈತರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸುವುದು. ಸದರಿ ಸಂವಾದ ಕಾರ್ಯಕ್ರಮದಲ್ಲಿ ರೈತರ ಸ್ಥಳೀಯ ಅವಶ್ಯಕತೆಗಳು ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ಕೈಗೊಳ್ಳುವುದು ಹಾಗೂ ಅವುಗಳ ನಿವಾರಣೆಗೆ ಸ್ಥಳದಲ್ಲಿಯೇ ಪರಿಹಾರ ಸೂಚಿಸುವುದು.

**ಅನುದಾನ: ಪ್ರತಿ ಹೋಬಳಿಗೆ - ರೂ.26,990/-**

ಅನುಬಂಧ-4ರಲ್ಲಿ ನಿಗದಿಪಡಿಸಿರುವ ಅನುದಾನವನ್ನು ಉಪಯೋಗಿಸಿಕೊಳ್ಳುತ್ತಾ, ಜಿಲ್ಲಾ ಪಂಚಾಯಿತಿ, ಇತರೆ ಇಲಾಖೆಗಳ ಕಾರ್ಯಕ್ರಮಗಳ ಅನುದಾನ ಹೊಂದಿಸಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

**ಸಮಗ್ರ ಕೃಷಿ ಮಾಹಿತಿ ಘಟಕ:**

ಸಂಚಾರಿ ಕೃಷಿ ಮಾಹಿತಿ ಘಟಕವನ್ನು ಬಳಸಿಕೊಂಡು ಕೃಷಿ ಮತ್ತು ವಿವಿಧ ಇಲಾಖಾ ಅಧಿಕಾರಿಗಳು, ಪ್ರತಿ ಹೋಬಳಿಯ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಂತೆ ಮೂರು ದಿನಗಳ ಕಾಲ ತೀವ್ರ ಪ್ರಚಾರ ಕೈಗೊಳ್ಳುವುದರ ಜೊತೆಗೆ ಸ್ಥಳೀಯವಾಗಿ ರೈತರ-ವಿಜ್ಞಾನಿಗಳ ಸಂವಾದ ಏರ್ಪಡಿಸುವುದು.

**ಪ್ರಚಾರ ಕಾರ್ಯಕ್ರಮದಲ್ಲಿ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವುದು.**

- ಕೃಷಿ ತಾಂತ್ರಿಕ ಮಾಹಿತಿ
- ಹೊಸ ತಂತ್ರಜ್ಞಾನ ಪರಿಚಯ ಮತ್ತು ಕೌಶಲ್ಯ ಪ್ರಾತ್ಯಕ್ಷಿಕೆ, ಬೀಜೋಪಚಾರ/ಸಸ್ಯ ಸಂರಕ್ಷಣಾ ಆಂದೋಲನ ಹಮ್ಮಿಕೊಳ್ಳುವುದು
- ಮಣ್ಣು ಆರೋಗ್ಯ ಅಭಿಯಾನ, ಆತ್ಮ ಯೋಜನೆ, ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ, ಸಾವಯವ ಭಾಗ್ಯ ಯೋಜನೆ ಇತ್ಯಾದಿ.
- ಬೆಳೆ ಸಮೀಕ್ಷೆ, ಬೆಳೆ ವಿಮೆ ಮತ್ತು ಕೃಷಿ ಸಾಲ ಸೌಲಭ್ಯ
- ಕೃಷಿ ಪರಿಕರಗಳು, ಕೃಷಿ ಯಂತ್ರೋಪಕರಣಗಳು, ಬಾಡಿಗೆ ಆಧಾರಿತ ಸೇವಾ ಕೇಂದ್ರ (ಯಂತ್ರಧಾರೆ), ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳು, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳು ಇತ್ಯಾದಿ
- ಕೃಷಿ ಹಾಗೂ ಇತರೆ ಇಲಾಖೆಗಳ ಯೋಜನೆಗಳು ಹಾಗೂ ಸವಲತ್ತು ಲಭ್ಯತೆ
- ಮಣ್ಣು ಮಾದರಿಗಳ ಸಂಗ್ರಹಣೆ ಹಾಗೂ ಈಗಾಗಲೇ ವಿಶ್ಲೇಷಣೆಯಾಗಿರುವ ಮಾದರಿಗಳ ಮಣ್ಣುಆರೋಗ್ಯ ಚೀಟಿಗಳ ವಿತರಣೆ
- ಖಾಸಗಿ ಕಂಪನಿಗಳ ಸಹಯೋಗದೊಂದಿಗೆ ಸಂಚಾರಿ ಮಣ್ಣು ಪರೀಕ್ಷಾ ಘಟಕಗಳನ್ನು ಉಪಯೋಗಿಸಿಕೊಂಡು ಮಣ್ಣು ಮಾದರಿಗಳ ವಿಶ್ಲೇಷಣೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ.
- ರೈತರ ಕ್ಷೇತ್ರ ಪಾಠಶಾಲೆ, ಕೃಷಿ ಆಧಾರಿತ ಉಪ ಕಸುಬುಗಳ ಬಗ್ಗೆ ಮಾಹಿತಿ

## ಅನುಷ್ಠಾನ ಸಮಿತಿ:

ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯನ್ವಯ (ಅನುಬಂಧ-1) ತಮ್ಮ ಜಿಲ್ಲೆಯಲ್ಲಿ ಕೃಷಿ ಅಭಿಯಾನವನ್ನು ಏರ್ಪಡಿಸುವ ಬಗ್ಗೆ ಚರ್ಚಿಸಿ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.

ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿರುವ ತಾಲ್ಲೂಕು ಮಟ್ಟದ ಅನುಷ್ಠಾನ ಕಾರ್ಯತಂಡ (ಅನುಬಂಧ-2) ಹಾಗೂ ಹೋಬಳಿ ಮಟ್ಟದ ಅನುಷ್ಠಾನ ಕಾರ್ಯತಂಡ (ಅನುಬಂಧ-3) ರಲ್ಲಿ ಚರ್ಚಿಸಿ, ಕ್ರಮವಹಿಸುವುದು.

## ಕೃಷಿ ಅಭಿಯಾನ ಕಾರ್ಯಕ್ರಮದ ಚಟುವಟಿಕೆಗಳನ್ನು ನಿರ್ವಹಿಸುವ ವಿಧಾನ:

- ಕಾರ್ಯಕ್ರಮದ ವೇಳಾಪಟ್ಟಿ ಅನ್ವಯ ಮುಂಚಿತವಾಗಿ ವ್ಯಾಪಕವಾದ ಪ್ರಚಾರ ಕೈಗೊಳ್ಳುವುದು.
- ದಿನಪತ್ರಿಕೆ /ರೇಡಿಯೋ/ ದೂರದರ್ಶನ/ ಕೇಬಲ್ ನೆಟ್ ವರ್ಕ್ ಗಳಲ್ಲಿ ಸುರುಳಿ ಸಂದೇಶಗಳು/ ಪ್ರಚಾರ ಸಂದೇಶಗಳು/ ಪ್ರಚಾರ/ ಜಾಹೀರಾತು ನೀಡುವುದು.
- ಕಾರ್ಯಕ್ರಮದ ದಿನ ಸಮಗ್ರ ಕೃಷಿ ಮಾಹಿತಿ ಘಟಕವು ಇಲಾಖಾ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಒಳಗೊಂಡಂತೆ ಪ್ರಚಾರ ಏರ್ಪಡಿಸುವುದು.
- ಸಹಭಾಗಿತ್ವದ ಚಟುವಟಿಕೆಗಳನ್ನು ಅಳವಡಿಸಿಕೊಂಡು, ರೈತರ ಮನಮುಟ್ಟುವ ರೀತಿಯಲ್ಲಿ ಮಾಹಿತಿಯನ್ನು ನೀಡುವುದು.
- ಮಾದರಿ ರೈತ ಪ್ರಯತ್ನಗಳ ಅನುಭವ ಹಂಚಿಕೆ.
- ವಿಷಯ ತಜ್ಞರಿಂದ ನಿರ್ದಿಷ್ಟ ವಿಷಯ ಕುರಿತು ಕಿರು ಉಪನ್ಯಾಸ.
- ಹೊಸ ತಂತ್ರಜ್ಞಾನ ಪರಿಚಯ.
- ವಿವಿಧ ಇಲಾಖೆಗಳ ಬಗ್ಗೆ ಮಾಹಿತಿ ಕರಪತ್ರಗಳ ವಿತರಣೆ.
- ಕೃಷಿ ಅಭಿಯಾನ ಬಗ್ಗೆ ಆಯ್ದ ರೈತರಿಂದ ಪ್ರತಿಕ್ರಿಯೆ ಆಲಿಕೆ.

**ದಾಖಲೀಕರಣ:**

ಪ್ರತಿ ಹೋಬಳಿ ಮಟ್ಟದ ಪ್ರಚಾರ ಕಾರ್ಯಕ್ರಮ ನಡೆಯುವ ಚಟುವಟಿಕೆಗಳನ್ನು ದೃಶ್ಯ (ವಿಡಿಯೋ ಮತ್ತು ಛಾಯಾಚಿತ್ರ) ಮತ್ತು ಮುದ್ರಣ ಮಾಧ್ಯಮಗಳ (ಪ್ರಿಂಟ್ ಮೀಡಿಯಾ) ಮೂಲಕ ದಾಖಲಿಸುವುದು ಹಾಗೂ ಅವಶ್ಯ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು.

**ಕೃಷಿ ಅಭಿಯಾನದ ಆಯೋಜನೆಯಿಂದ ನಿರೀಕ್ಷಿತ ಫಲಿತಾಂಶ/ಪ್ರತಿಫಲಗಳು:**

- ಕೃಷಿ ಇಲಾಖೆ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳ ಯೋಜನೆಗಳು ರೈತರ ಮನೆ-ಮನಕ್ಕೆ ನೇರವಾಗಿ ತಲುಪಿಸುವುದು
- ರೈತರ ಮತ್ತು ಕೃಷಿ ವಿಜ್ಞಾನಿಗಳ ನಡುವೆ ಚರ್ಚೆ/ನೇರ ಸಂವಾದ/ಸಮಸ್ಯಗಳಿಗೆ ಸ್ಪಂದನ.
- ರೈತರಿಗೆ ಸಕಾಲದಲ್ಲಿ ಕೃಷಿ ಪರಿಕರಗಳು/ ಸಾಮಗ್ರಿಗಳು/ ಸೌಲಭ್ಯಗಳನ್ನು ದೊರಕಿಸಿ ಕೊಡುವುದು.
- ಮಾದರಿ ಪ್ರಯತ್ನಗಳ ಪ್ರಚಾರ, ಮಾದರಿ ರೈತರ ಜ್ಞಾನದ ಪರಸ್ಪರ ಹಂಚಿಕೆಗೆ ಅವಕಾಶ ಕಲ್ಪಿಸುವುದು
- ತಾಂತ್ರಿಕತೆಗಳ ಅಳವಡಿಕೆಯನ್ನು ಪ್ರೋತ್ಸಾಹಿಸುತ್ತಾ, ಆಹಾರ ಬೆಳೆಗಳ ಉತ್ಪಾದಕತೆಯಲ್ಲಿ ಗಮನಾರ್ಹ ಬದಲಾವಣೆ ತರುವುದು
- ಸಾಮಾನ್ಯ ಕೃಷಿ ಅಭಿವೃದ್ಧಿಗೆ ಬೇಕಾದ ಎಲ್ಲಾ ಕ್ರಮಗಳ ನಿರ್ವಹಣೆಗೆ ನಿರಂತರ ಸಿದ್ಧತೆ ಮಾಡುವುದು.

## ಅನುಬಂಧ-1

## ಜಿಲ್ಲಾ ಮಟ್ಟದ ಸಮಿತಿ

| | |
|---|---|
| ಅಧ್ಯಕ್ಷರು | ಜಿಲ್ಲಾಧಿಕಾರಿಗಳು |
| ಸಹ ಅಧ್ಯಕ್ಷರು | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು |
| ಸದಸ್ಯ ಕಾರ್ಯದರ್ಶಿ | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು |
| ಸದಸ್ಯರು | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ<br>ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ<br>ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ<br>ಉಪ ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ<br>ವಿಸ್ತರಣಾ ಸಂಯೋಜಕರು, ಕೃಷಿ/ ತೋಟಗಾರಿಕೆ/ ಪಶುವೈದ್ಯಕೀಯ ವಿಶ್ವವಿದ್ಯಾಲಯ ಅಥವಾ ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರ<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ<br>ಜಿಲ್ಲಾ ಶಿಕ್ಷಣಾಧಿಕಾರಿಗಳು<br>ವ್ಯವಸ್ಥಾಪಕರು, (NABARD)<br>ವ್ಯವಸ್ಥಾಪಕರು, (BLBC) |

## ಅನುಬಂಧ-2

## ತಾಲ್ಲೂಕು ಮಟ್ಟದ ಕಾರ್ಯತಂಡ

| ಸಂಯೋಜಕರು | ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು |
|---|---|
| ಕಾರ್ಯತಂಡ | ತಾಲ್ಲೂಕು ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ<br>ತಾಲ್ಲೂಕು ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಇಲಾಖೆ<br>ತಾಲ್ಲೂಕು ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ<br>ತಾಲ್ಲೂಕು ಮಟ್ಟದ ಅಧಿಕಾರಿಗಳು, ಕೃಷಿ ಮಾರುಕಟ್ಟೆ ಇಲಾಖೆ<br>ತಾಲ್ಲೂಕು ಸಹಾಯಕ ನಿರ್ದೇಶಕರು, ರೇಷ್ಮೆ ಇಲಾಖೆ<br>ವಿಮಾ ಸಂಸ್ಥೆಯ ಪ್ರತಿನಿಧಿಗಳು<br>ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರ<br>ತಾಲ್ಲೂಕು ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ<br>ತಾಲ್ಲೂಕು ಅರಣ್ಯ ಇಲಾಖೆ ಅಧಿಕಾರಿಗಳು<br>ತಾಲ್ಲೂಕು ಶಿಕ್ಷಣಾಧಿಕಾರಿಗಳು<br>ವ್ಯವಸ್ಥಾಪಕರು, (BLBC) |

## ಅನುಬಂಧ-3

## ಹೋಬಳಿ ಮಟ್ಟದ ಅನುಷ್ಠಾನ ಕಾರ್ಯತಂಡ

| ಸಂಯೋಜಕರು | ಹೋಬಳಿ ಮಟ್ಟದ ಕೃಷಿ ಅಧಿಕಾರಿ |
|---|---|
| ಕಾರ್ಯತಂಡ | Nodal Scientist, ಕೃಷಿ ವಿಶ್ವವಿದ್ಯಾಲಯ<br>ಹೋಬಳಿ ಮಟ್ಟದ ಅಧಿಕಾರಿಗಳು<br>ಕೃಷಿ ಇಲಾಖಾ ಅಧಿಕಾರಿಗಳು<br>ತೋಟಗಾರಿಕೆ ಇಲಾಖೆ<br>ಪಶುಸಂಗೋಪನಾ ಇಲಾಖೆ ಅಧಿಕಾರಿಗಳು<br>ರೇಷ್ಮೆ ಇಲಾಖೆ ಅಧಿಕಾರಿಗಳು<br>ಕಂದಾಯ ಅಧೀಕ್ಷಕರು<br>ಸಹಕಾರ ಇಲಾಖೆ ಅಧಿಕಾರಿಗಳು<br>ಅರಣ್ಯ ಇಲಾಖೆ ಅಧಿಕಾರಿಗಳು<br>ವಿಮಾ ಸಂಸ್ಥೆಯ ಪ್ರತಿನಿಧಿಗಳು<br>ಶಿಕ್ಷಣ ಇಲಾಖೆ ಅಧಿಕಾರಿಗಳು<br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು |

## ಅನುಬಂಧ-4

## ಹೋಬಳಿ ಮಟ್ಟದಲ್ಲಿ ಆಯೋಜಿಸಲಾಗುವ " ಕೃಷಿ ಅಭಿಯಾನ" ಕಾರ್ಯಕ್ರಮದಡಿ ಪ್ರಚಾರ ಕಾರ್ಯಕ್ಕೆ ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿದೆ.

| ಕ್ರ. ಸಂ. | ಕಾರ್ಯಕ್ರಮ | ಅನುದಾನ (ರೂ ಗಳಲ್ಲಿ) |
|---|---|---|
| 1 | ಸಂಚಾರಿ ಮಾಹಿತಿ ಘಟಕದ ಇಂಧನ ವೆಚ್ಚ, ಧ್ವನಿ ವರ್ಧಕ ಪ್ರಚಾರ (Posters, Banner, Brochures, Leaflets), ವಿಡಿಯೋ ಮತ್ತು ಛಾಯಾಚಿತ್ರ, ಇತ್ಯಾದಿ | **ರೂ. 26,990/-** |

## ಸೂಚನೆ:

1. ಅನುಬಂಧ-4 ರಲ್ಲಿ ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ಜಿಲ್ಲಾ ಪಂಚಾಯತಿ, ಇತರೆ ಇಲಾಖೆಗಳ ಕಾರ್ಯಕ್ರಮಗಳ ಅನುದಾನ, ಸ್ಥಳೀಯ ಸಂಸ್ಥೆಗಳ ಪ್ರಯೋಜಕತ್ವ ಮುಖಾಂತರ, ಒಟ್ಟಾರೆಯಾಗಿ ಕಾರ್ಯಕ್ರಮಕ್ಕೆ ಹೆಚ್ಚುವರಿ ಅನುದಾನ ಹೊಂದಿಸಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.
2. **2022-23ನೇ** ಸಾಲಿನ ಜಿಲ್ಲಾವಾರು ಅನುದಾನ ಹಂಚಿಕೆ ವಿವರವನ್ನು ಅನುಬಂಧ-5 ರಲ್ಲಿ ನೀಡಿದೆ.
3. ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ರೈತರ ಮತ್ತು ರೈತ ಮಹಿಳೆಯರ ವಿವರ, ಪರಿಶಿಷ್ಟ ಜಾತಿ/ಪಂಗಡದ ರೈತರನ್ನು ಕಡ್ಡಾಯವಾಗಿ ನೊಂದಣಿ ಮಾಡತಕ್ಕದ್ದು.

## ಅನುಬಂಧ - 5

### 2022-23ನೇ ಸಾಲಿನ ಕೃಷಿ ಅಭಿಯಾನ ಕಾರ್ಯಕ್ರಮಕ್ಕೆ ಜಿಲ್ಲಾವಾರು ಅನುದಾನ ಹಂಚಿಕೆ ವಿವರ: ಲೆಕ್ಕ ಶೀರ್ಷಿಕೆ: 2401-00-109-0-21 ಉ.ಶೀ:059

### ರಾಜ್ಯ ವಲಯ ಯೋಜನೆ

| ಕ್ರ. ಸಂ. | ಜಿಲ್ಲೆಗಳು | ಒಟ್ಟು ಹೋಬಳಿಗಳು | ಅನುದಾನ (ಲಕ್ಷ ರೂ.ಗಳಲ್ಲಿ) ಪ್ರತಿ ಹೋಬಳಿಗೆ (ರೂ.26,990) |
|---|---|---|---|
| 1 | ಬಾಗಲಕೋಟೆ | 18 | 4.86 |
| 2 | ಬೆಂಗಳೂರು | 28 | 7.56 |
| 3 | ಬೆಳಗಾವಿ | 35 | 9.45 |
| 4 | ಬಳ್ಳಾರಿ | 13 | 3.50 |
| 5 | ವಿಜಯನಗರ | 18 | 4.86 |
| 6 | ಬೀದರ್ | 30 | 8.10 |
| 7 | ವಿಜಯಪುರ | 20 | 5.40 |
| 8 | ಚಾಮರಾಜನಗರ | 16 | 4.32 |
| 9 | ಚಿಕ್ಕಬಳ್ಳಾಪುರ | 26 | 7.02 |
| 10 | ಚಿಕ್ಕಮಗಳೂರು | 34 | 9.18 |
| 11 | ಚಿತ್ರದುರ್ಗ | 22 | 5.93 |
| 12 | ದಕ್ಷಿಣ ಕನ್ನಡ | 16 | 4.32 |
| 13 | ದಾವಣಗೆರೆ | 20 | 5.40 |
| 14 | ಧಾರವಾಡ | 14 | 3.77 |
| 15 | ಗದಗ | 11 | 2.97 |
| 16 | ಕಲಬುರಗಿ | 32 | 8.64 |
| 17 | ಹಾಸನ | 38 | 10.26 |
| 18 | ಹಾವೇರಿ | 19 | 5.13 |
| 19 | ಕೊಡಗು | 16 | 4.32 |
| 20 | ಕೋಲಾರ | 27 | 7.28 |
| 21 | ಕೊಪ್ಪಳ | 20 | 5.40 |
| 22 | ಮಂಡ್ಯ | 31 | 8.37 |
| 23 | ಮೈಸೂರು | 33 | 8.91 |
| 24 | ರಾಯಚೂರು | 37 | 9.99 |
| 25 | ರಾಮನಗರ | 18 | 4.86 |
| 26 | ಶಿವಮೊಗ್ಗ | 39 | 10.53 |
| 27 | ತುಮಕೂರು | 50 | 13.50 |
| 28 | ಉಡುಪಿ | 09 | 2.42 |
| 29 | ಉ.ಕನ್ನಡ | 35 | 9.44 |
| 30 | ಯಾದಗಿರಿ | 16 | 4.31 |
| | ಒಟ್ಟು | 741 | 200.00 |

ಕೃಷಿ ನಿರ್ದೇಶಕರು

ಪುಟ-9